<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ</u>

<u>ಸಿ.ಸಿ. ನಂ. **86 / 2018**</u>

ಸಿಡಬ್ಲ್ಯೂ- **17**
ಪಿಡಬ್ಲ್ಯೂ-**07**

<u>ದಿನಾಂಕಃ **11.06.2026.**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

<u>ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ.ಎಸ್.ಎನ್.ವೈ ರವರಿಂದಃ</u>

ದಿನಾಂಕಃ 20.01.2017 ರಂದು ಈ ಪ್ರಕರಣದ ಘಟನೆ ಆಗಿತ್ತು ಎಂದರೆ ಸರಿ. ದಿನಾಂಕಃ 10.04.2017 ರಂದು ದೂರುದಾರಳು ದೂರನ್ನು ನೀಡಿದಳು ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಒಂದು ಕ್ರಿಮಿನಲ್ ಪ್ರಕರಣ ಘಟನೆ ಆದರೆ ದೂರನ್ನು ನೀಡಲು 7 ದಿನಗಳು ತಡ ಆದರು ಸಹ ನಾವು ಸದರಿ ದೂರನ್ನು ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ದೂರನ್ನು ನೀಡಿದ ನಂತರ ಘಟನ ಸ್ಥಳಕ್ಕೆ ಹೋಗಿ ತನಿಖೆ ಮಾಡಿರುತ್ತೇನೆ. ಆರೋಪಿತರ ಅಕ್ಕಪಕ್ಕದ ಮನೆಯವರನ್ನು ನೀವೇನಾದರೂ ವಿಚಾರಣೆ ಮಾಡಿರುವೀರಾ ಎಂದರೆ ಸಾಕ್ಷಿಯು ಚಾಸಾ-4 ರವರನ್ನು ನಾನು ವಿಚಾರಣೆ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಚಾಸಾ-4 ರವರು ಆರೋಪಿತರ ಮನೆಯ ಅಕ್ಕಪಕ್ಕದವರು ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-4 ರವರು ಖಾಯಂ ನಿವಾಸಿಯಾಗಿ ಶಹಾಪೂರ ತಾಲೂಕಿನ ಹಳ್ಳಿಸಾಗರ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-5 ರವರು ಸಹ ಆರೋಪಿತರ ಮನೆಯ ಅಕ್ಕಪಕ್ಕದವರು ಇರುತ್ತಾರೆ. ಚಾಸಾ-5 ರವರು ಆರೋಪಿತರ ಮನೆಯ ಅಕ್ಕಪಕ್ಕದರು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮನೆಯ ಅಕ್ಕಪಕ್ಕದ ಇತರ ಜನರನ್ನು ಸಹ ನಾನು ವಿಚಾರಣೆ ಮಾಡಿರುತ್ತೇನೆ ಆದರೆ ಅವರ ಹೆಸರು ಈಗ ನನಗೆ ನೆನಪಿಗೆ ಬರುತ್ತಿಲ್ಲ. ಚಾಸಾ-4 ದೂರುದಾರಳ ಸೋದರ ಮಾವ ಇರುತ್ತಾನೆ ಎಂದರೆ ಸರಿ. ಚಾಸಾ-6 ದೂರುದಾರಳ ಚಿಕ್ಕಪ್ಪ ಆಗಬೇಕು ಎಂದರೆ ಸರಿ. ಅಂತಿಮ ವರದಿಯ ಸಾಕ್ಷಿದಾರರೆಲ್ಲರೂ ಚಾಸಾ-1 ರವರ ಸಂಬಂಧಿಕರಾಗಬೇಕು ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿ ವಿಚಾರಣೆ ಮಾಡಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಈ ಪ್ರಕರಣವನ್ನು ನೀವೇನಾದರೂ ಜಿಲ್ಲಾ welfare ಕಮಿಟಿಗೆ ಕಳುಹಿಸಿರುವೀರಾ ಎಂದರೆ ಸಾಕ್ಷಿಯು ಸದರಿ ಕಮಿಟಿಗೆ ಮಾಹಿತಿಯನ್ನು ತಿಳಿಸಿರುತ್ತೇವೆ ಎಂದು ಹೇಳುತ್ತಾರೆ. ಸದರಿ ಕಮಿಟಿಯವರು ಈ ಪ್ರಕರಣವು ವರದಕ್ಷಣೆ ಕಿರುಕುಳ ಪ್ರಕರಣ ಆಗುತ್ತದೆ ಎಂದು ಹೇಳಿ ವರದಿಯನ್ನು ನನಗೆ ನೀಡಿರುವುದಿಲ್ಲ ಆದರೆ ಅದು ಆಗುತ್ತದೆ ಎಂದು ನನಗೆ ಹೇಳಿದರು. ದೂರು ದಾಖಲಾದ ನಂತರ ಜಿಲ್ಲಾ welfare ಕಮಿಟಿಗೆ ಮಾಹಿತಿಯನ್ನು ನೀಡಿರುತ್ತೇನೆ ಆದರೆ ನನಗೆ

ದಿನಾಂಕವನ್ನು ನಿಖರವಾಗಿ ಹೇಳಲು ಆಗುವುದಿಲ್ಲ. ಜಿಲ್ಲಾ welfare ಕಮಿಟಿಯಿಂದ ಎಷ್ಟು ದಿನಗಳ ನಂತರ ನಿಮ್ಮಗೆ ಮಾಹಿತಿಯನ್ನು ನೀಡಿದರು ಎಂದರೆ ಸಾಕ್ಷಿಯು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ನಾನು ಜಿಲ್ಲಾ welfare ಕಮಿಟಿಗೆ ಮಾಹಿತಿಯನ್ನು ನೀಡದಿದ್ದರೂ ಸಹ ನೀಡಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಲಗ್ನ ಪತ್ರವನ್ನು ನಾನೇ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗಿ ನಾನೇ ಲಗ್ನ ಪತ್ರವನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಅದನ್ನು ದೂರುದಾರಳು ನೀಡಿದಳು ಎಂದು ಹೇಳುತ್ತಾರೆ. ದೂರುದಾರಳು ಹಾಗೂ 1 ನೇ ಆರೋಪಿತನ ಮದುವೆ ಆಗಿ 10 ವರ್ಷಗಳು ಆಗಿರುವ ಕಾರಣ ಈ ಪ್ರಕರಣವು ವರದಕ್ಷಣೆ ಕಿರುಕುಳ ಪ್ರಕರಣ ಆಗುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿತನು 2 ನೇ ಮದುವೆ ಮಾಡಿಕೊಂಡಿರುತ್ತಾನೆ ಎಂದು ಅನುಮಾನವಾಗಿ ದೂರನ್ನು ದೂರುದಾರಳು ಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. 1 ನೇ ಆರೋಪಿತನು 2 ನೇ ಮದುವೆಯನ್ನು ಮಾಡಿಕೊಂಡಿರುತ್ತೇನೆ ಎಂದು ನಾನು ತನಿಖೆಯನ್ನು ಮಾಡಿರುತ್ತೇನೆ ಆದರೆ  ಯಾವುದೇ ದಾಖಲಾತಿಗಳು ಲಭ್ಯ ಆಗಿರುವುದಿಲ್ಲ. 1 ನೇ ಆರೋಪಿ ಮತ್ತು ದೂರುದಾರಳು ಬಹಳ ದಿನಗಳಿಂದ ಅವಳ ತವರು ಮನೆಯಲ್ಲಿ ವಾಸವಾಗಿದ್ದಳು ಎಂದರೆ ಸರಿಯಲ್ಲ. 1 ನೇ ಆರೋಪಿತನು ಏನು ಕೆಲಸ ಮಾಡುತ್ತಿದ್ದನ್ನು ಎಂದು ನೀವೇನಾದರೂ ವಿಚಾರಣೆ ಮಾಡಿರುವೀರಾ ಎಂದರೆ ಸಾಕ್ಷಿಯು ಆತನು ಒಕ್ಕಲುತನ ಕೆಲಸ ಮಾಡುತ್ತಾನೆ ಎಂದು ಹೇಳಿರುತ್ತಾನೆ ಎಂದು ಹೇಳುತ್ತಾರೆ. 1 ನೇ ಆರೋಪಿತನು ಗೌಂಡಿ ಕೆಲಸ ಮಾಡುತ್ತಿದ್ದನ್ನು ಎಂದರೆ ಸರಿಯಲ್ಲ. 1 ನೇ ಆರೋಪಿತನು ಗೌಂಡಿ ಕೆಲಸದಿಂದ ಬಂದ ಹಣವನ್ನು ದೂರುದಾರಳಿಗೆ ನೀಡುತ್ತಿದ್ದನ್ನು ಎಂದರೆ ಸರಿಯಲ್ಲ. ಸದರಿ ಹಣವನ್ನು ದೂರುದಾರಳು ಕೈಗಡ ಸಾಲವನ್ನು ಇತರರಿಗೆ ಊರಲ್ಲಿ ನೀಡುತ್ತಿದ್ದಳು ಎಂದರೆ ಸರಿಯಲ್ಲ. 1 ನೇ ಆರೋಪಿತನು ಸದರಿ ಗೌಂಡಿ ಕೆಲಸದಿಂದ ದೂರುದಾರಳಿಗೆ  ನೀಡಿದ ಹಣವನ್ನು ಮರಳಿ ನೀಡಬೇಕೆಂದು ಕೇಳಿದ್ದಾಗ ಅವರಲ್ಲಿ ಜಗಳ ಆಯಿತು ಎಂದರೆ ಸರಿಯಲ್ಲ. 1 ನೇ ಆರೋಪಿತನು ದುಡಿದ ಹಣವನ್ನು ನೀಡಿದ ಹಣದಿಂದ ದೂರುದಾರಳು ಅವಳ ತಮ್ಮನ ಹೆಸರಿನಲ್ಲಿ ಸರ್ವೆ ನಂಃ 278/5 ರಲ್ಲಿ 1 ಎಕರೆ 35 ಗುಂಟೆ ಜಮೀನನ್ನು ಖರೀದಿಸಿದ್ದಳು ಎಂದರೆ ಸರಿಯಲ್ಲ. ಸದರಿ ಹಣದ ಕುರಿತು ತಂಟೆ ಅದ ನಂತರ ಪಂಚಾಯತಿ ಮಾಡುತ್ತಾರೆ ಎಂದು ತಿಳಿದು ದೂರುದಾರಳು ಆತೋಪಿತರ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿರುತ್ತಾಳೆ ಎಂದರೆ ಸರಿಯಲ್ಲ.

ಈ ಪ್ರಕರಣದ ಕುರಿತು ನಾನು ಗುನ್ನಾ ಸ್ಥಳಕ್ಕೆ ಹೋಗಿ ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.  ಮೊದಲು ಚಾಸಾ-2 ಮತ್ತು 3 ರವರು ನನಗೆ ಪರಿಚಯ ಇರಲಿಲ್ಲ. ಚಾಸಾ-2 ಮತ್ತು 3 ರವರನ್ನು ನಾನೇ ಸ್ಥಳದಲ್ಲಿ ಕರೆಯಿಸಿಕೊಂಡಿದೇ.ಚಾಸಾ-2 ಮತ್ತು 3 ರವರು ದೂರುದಾರಳ ಸಂಬಂಧಿಕರು ಆಗಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರು ಠಾಣೆಗೆ ಬಂದು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳದ ಕಚ್ಚಾ ನಕಾಶೆಯು ತಪ್ಪು ಇರುತ್ತದೆ ಎಂದರೆ

ಸರಿಯಲ್ಲ. ಗುನ್ನಾ ಸ್ಥಳದ ಪೂರ್ವಕ್ಕೆ ಖಾಲಿ ಜಾಗ ಇರುತ್ತದೆ ಎಂದು ಬರೆದದ್ದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳದ ಪಶ್ಚಿಮಕ್ಕೆ ಖಾಲಿ ಜಾಗ ಇರುತ್ತದೆ ಎಂದು ಬರೆದದ್ದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳದ ಪಶ್ಚಿಮಕ್ಕೆ ಆರೋಪಿತಳ ಚಿಕ್ಕಪ್ಪನ ಮನೆ ಇರುತ್ತದೆ ಎಂದರೆ ಸಾಕ್ಷಿಯು ಮನೆಗಳು ಸಹ ಇರುತ್ತವೆ ಎಂದು ಹೇಳುತ್ತಾರೆ. ಗುನ್ನಾ ಸ್ಥಳದ ಉತ್ತರಕ್ಕೆ ಕಚ್ಚಾ ರಸ್ತೆ ಇರುತ್ತದೆ ಎಂದು ಬರೆದದ್ದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನಾವು ಹೇಳಿದ ಗುನ್ನಾ ಸ್ಥಳವು ಹಾಗೂ ಚಾಸಾ-2 ರವರು ಮಾಡಿದ ಕಚ್ಚಾ ಆಫ್ ನಕಾಶೆಯ ಗುನ್ನಾ ಸ್ಥಳವು ಒಂದಕ್ಕೊಂದು ತಾಳೇ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಗುನ್ನಾ ಸ್ಥಳಕ್ಕೆ ಹೋಗಿ ಪಂಚನಾಮೆಯನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಕಚೇರಿಯಲ್ಲಿ ಕುಳಿತು ಗುನ್ನಾ ಸ್ಥಳದ ಪಂಚನಾಮೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಯನ್ನು ಕಾಡಂಗೇರಾ ಮತ್ತು ಪೊಲೀಸ್ ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ. ಸಾಕ್ಷಿದಾರರ ಹೇಳಿಕೆಗಳನ್ನು ನಾನು ಕಾಡಂಗೇರಾ ಗ್ರಾಮದಲ್ಲಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದೂರುದಾರಳ ಹೇಳಿಕೆಯ ಮೇರೆಗೆ ನಾನು ಠಾಣೆಯಲ್ಲಿಯೇ ಕುಳಿತು ಸಾಕ್ಷಿದಾರರ ಹೇಳಿಕೆಗಳನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ದೂರುದಾರಳು ಠಾಣೆಗೆ ಬಂದಾಗ ಅವರಿಗೆ ಗಾಯಗಳು ಆಗಿರುತ್ತವೆ ಎಂದು ನನಗೆ ಹೇಳಿರುವುದಿಲ್ಲ. ನಾನು ಅವರಿಗೆ ಆದ ಗಾಯಗಳ ಬಗ್ಗೆ ನೋಡಿರುವುದಿಲ್ಲ ಸಾಕ್ಷಿಯು ಮುಂದುವರೆದು ನೋಡಿರುತ್ತೇನೆ ಆದರೆ ಅದು ನನಗೆ ಕಂಡು ಬಂದಿರುವುದಿಲ್ಲ. ಈ ಪ್ರಕರಣದ ಘಟನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ರಾಜಕೀಯ ಒತ್ತಡದಿಂದ ಈ ಸುಳ್ಳು ದೂರನ್ನು ಆರೋಪಿತರ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃ

( ತೆರೆದ ನ್ಯಾಯಾಲಯದಲ್ಲಿ ವಿ.ಸಿ. ಮುಖಾಂತರ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.